ಎಂಬುವರು ಮೇ ತಿಂಗಳಲ್ಲಿ ಷಾ ಆಯೋಗದ ಮುಂದೆ ಲಾರೆನ್ಸ್ ಫರ್ನಾಂಡೀಸ್ ಬಂದಿದ್ದರು ಎಂದು ಹೇಳಿದ್ದಕ್ಕೆ ಅವರನ್ನು ಜನವರಿ ೨೦ರಲ್ಲಿ ಅವರನ್ನು ಬೆಂಗಳೂರಿನಿಂದ ದಾಬಸ್ ಪೇಟೆಗೆ ವರ್ಗ ಮಾಡಿರುವುದು ಸರಿಯೇ ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ವರ್ಗಾವಣೆಗೂ ಇದಕ್ಕೂ ಸಂಬಂಧವಿಲ್ಲ. ವರ್ಗಾವಣೆ ಮಾಮೂಲಾಗಿ ನಡೆಯುತ್ತಾ ಇದೆ.

ಶ್ರೀ ಪಿ. ರಾಮದೇವ್.—ಈ ಷಾ ಕಮೀಷನ್ನಿನ ಮುಂದೆ ಅವರು ಒಬ್ಬರೇ ಪ್ರಾಮುಖ್ಯವಾಗಿ ಎವಿಡೆನ್ಸ್ ಕೊಟ್ಟಿದ್ದಾರೆ. ಅವರು ಏನು ಎವಿಡೆನ್ಸ್ ಕೊಟ್ಟಿದ್ದಾರೆ ಎಂದರೆ ಲಾರೆನ್ಸ್ ಫೆರ್ನಾಂಡಿಸ್ ರವರು ಬಂದಿದ್ದರು, ನಾನು ಅವರಿಗೆ ಟ್ರೀಟ್‌ಮೆಂಟ್ ಕೊಟ್ಟಿದ್ದೇನೆ ಎಂದು. ಅವರು ಈ ರೀತಿ ಒಂದು ಪ್ರಾಮುಖ್ಯವಾದ ಎವಿಡೆನ್ಸ್ ಕೊಟ್ಟಿದ್ದರಿಂದ ಅವರ ಮೇಲಿನ ಒಂದು ಸೇಡನ್ನು ತೀರಿಸಿಕೊಳ್ಳುವುದಕ್ಕೋಸ್ಕರ ತಾವು ಅವರೊಬ್ಬರನ್ನೇ ವರ್ಗಾವಣೆ ಮಾಡಿದ್ದೀರಿ ಎಂದು ನಾನು ತಮ್ಮ ಮೇಲೆ ಆಪಾದನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅದು ತಮ್ಮ ಅಭಿಪ್ರಾಯ ಇರಬಹುದು. ತಮ್ಮ ಈ ಒಂದು ಆಪಾದನೆಗೆ ಏನೂ ತಿರುಳಿಲ್ಲ ಎಂದು ಹೇಳುತ್ತೇನೆ.

Construction of K. S. R. T. C. Bus Stand at Nesargi

709. SRI R. C. BALEKUNDARGI (Bailhongal).—Will the Minister for Transport and Tourism be pleased to state.—

(a) whether Government intends to construct Karnataka State Road Transport Corporation Bus Stand at Nesargi ,

(b) if so, when and what is the estimate ?

SRI R. GUNDU RAO (Minister for Transport and Tourism).—

(a) Yes.

(b) Construction of Bus Stand at Nesargi is proposed for inclusion in the revised budget of 1978-79. The Estimate will be sanctioned after the revised budget is approved. The amount of estimate is Rs. 1,08,000.

ಶ್ರೀ ಆರ್. ಸಿ. ಬಾಳೆಕುಂದರ್ಗಿ.—ಸ್ವಾಮಿ, ತಾವು ಈ ಪ್ರಶ್ನೆಯ (ಆ) ಉತ್ತರವಾಗಿ ನೇಸರ್ಗಿಯಲ್ಲಿ ಬಸ್ಸು ನಿಲ್ದಾಣ ನಿರ್ಮಿಸುವುದನ್ನು ೧೯೭೮-೭೯ ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಸೇರಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದೀರಿ. ನಾನು ಇದರ ಬಗ್ಗೆ ಕೇಳುವುದು ಏನೆಂದರೆ ಚಳಿಗಾಲದಲ್ಲಿ ಮತ್ತು ಮಳೆಗಾಲದಲ್ಲಿ ಅದರ ಸುತ್ತಮುತ್ತ ಇರುವ ೧೫-೨೦ ಹಳ್ಳಿಗಳ ಜನರಿಗೆ ಬಹಳ ತೊಂದರೆಯಾಗಿರುವುದರಿಂದ ಇದನ್ನು ಯಾವಾಗ ಕಟ್ಟುತ್ತೀರಿ ಅನ್ನುವುದರ ಒಂದು ನಿಶ್ಚಿತ ಉತ್ತರ ಕೊಡುತ್ತೀರಾ ಎಂದು ಕೇಳುತ್ತೇನೆ.

† ಶ್ರೀ ಆರ್. ಗುಂಡೂರಾವ್,—ಇದರ ಬಗ್ಗೆ ನಾನು ಈ ಉತ್ತರದಲ್ಲೇ ಹೇಳಿದ್ದೇನೆ. ಅಲ್ಲಿ ಇದಕ್ಕಾಗಿ ಜಾಗವನ್ನು ಸರ್ಕಾರ ತೆಗೆದುಕೊಂಡಿದೆ. ಈ ಬಗ್ಗೆ ಪರಿಷ್ಕೃತ ಆಯವ್ಯಯವನ್ನು ಅನುಮೋದಿಸಿದ ನಂತರ ಅಂದಾಜನ್ನು ಮಂಜೂರ್ಮಾಡಲಾಗುವುದು ಮತ್ತು ಈ ಅಂದಾಜಿನ ಮೊಬಲಗು ೧,೦೮,೦೦೦ ರೂಪಾಯಿಗಳು ಆಗುತ್ತದೆ ಅನ್ನುವುದನ್ನು ಈ ಉತ್ತರದಲ್ಲೇ ತಿಳಿಸಿದ್ದೇನೆ.